**ಇಂದು ದಿನಾಂಕ:22.07.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ವಾದಿ ಪರ ಶ್ರೀ. ವಕೀಲರಿಂದಃ**

ಈ ಕೇಸಿನಲ್ಲಿ ಲಿಖಿತ ಹೇಳಿಕೆ ಹಾಗೂ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಲು ನಾನೇ ಮಾಹಿತಿ ಕೊಟ್ಟಿದ್ದೇನೆ. ವಾದಿ ನನ್ನ ಅಣ್ಣ ಆಗಬೇಕು. ನನ್ನ ತಂದೆ ರಾಮನಾಯಕ. ನನ್ನ ತಂದೆಯ ತಂದೆ ಹೆಸರು ಸುಬ್ಬನಾಯಕ. ನನ್ನ ತಂದೆ ಮತ್ತು ದೇವನಾಯಕ ಅಣ್ಣ ತಮ್ಮಂದಿರು ಎಂದರೆ ಸರಿ. ನನ್ನ ತಂದೆಗೆ ನಾನು ವಾದಿ ಮತ್ತು ಮೃತ ಸತೀಶನಾಯಕ ಎಂಬ 3 ಜನ ಮಕ್ಕಳು. ನಾವು ಹಿಂದಿನಿಂದಲೂ ಹಿಂದೂ ಅವಿಭಕ್ತ ಕುಟುಂಬದಲ್ಲಿ ವಾಸ ಮಾಡಿಕೊಂಡು ಬರುತ್ತಿದ್ದೇವೆ ಎಂದರೆ ಸರಿ. ನಮ್ಮ ತಂದೆಯ ಪಿತ್ರಾರ್ಜಿತ ಆಸ್ತಿಗಳನ್ನು ನಾವೆಲ್ಲರೂ ನಮ್ಮ ದೊಡ್ಡಪ್ಪನ ಜೊತೆ ಒಟ್ಟಾಗಿ ಅನುಭವಿಸಿಕೊಂಡು ಬರುತ್ತಿದ್ದೇವೆ ಎಂದರೆ ಸರಿ. ನಮ್ಮ ತಂದೆ 2012 ರಲ್ಲಿ ಮೃತಪಟ್ಟಿದ್ದಾರೆ. ನನ್ನ ತಂದೆ ತೀರಿಕೊಂಡ 3 ವರ್ಷದ ನಂತರ ನನ್ನ ಸಹೋದರ ಸತೀಶ ತೀರಿಕೊಂಡಿದ್ದಾರೆ. ನನ್ನ ತಂದೆ ತೀರಿಕೊಂಡ ನಂತರ ನನಗೆ ಮತ್ತು ನನ್ನ ಸಹೋದರರಿಗೆ ಪೌತಿ ಖಾತೆ ಮಾಡಿಸಿಕೊಳ್ಳಬೇಕು ಎಂದರೆ ಅದು ನಮಗೆ ಗೊತ್ತಾಗಲಿಲ್ಲ ಆದ್ದರಿಂದ ನನ್ನ ತಾಯಿಯ ಹೆಸರಿಗೆ ಖಾತೆಯಾಗಿದೆ. ದಾವಾ ಐಟಂ ನಂಬರ್ 1 ರ ಸ.ನಂ.30 ರಲ್ಲಿ ನನ್ನ ತಾತನಿಗೆ 5 ಎಕರೆ ಮಂಜೂರಾಗಿತ್ತು ಎಂದರೆ ಸರಿ. ಸದರಿ ವಿಸ್ತೀರ್ಣದಲ್ಲಿ ನನ್ನ ತಂದೆ ಮತ್ತು ನನ್ನ ದೊಡ್ಡಪ್ಪನಿಗೆ ವಿಭಾಗ ಆಗಿ ತಲಾ 2 ಎಕರೆ 20 ಗುಂಟೆ ಖಾತೆಯಾಯಿತು ಎಂದರೆ ಸರಿ. ಆ ರೀತಿ ವಿಭಾಗ ಮಾಡಿಕೊಂಡ ನಂತರ ನನ್ನ ತಂದೆ ಇನ್ನು ಸ್ವಲ್ಪ ಕಾಡು ಕಡಿದು 1 ಎಕರೆ 30 ಗುಂಟೆ ಅಭಿವೃದ್ದಿ ಮಾಡಿದ್ದರು ಎಂದರೆ ಸರಿಯಲ್ಲ. ಆ ರೀತಿ ನನ್ನ ತಂದೆ ಕಾಡು ಕಡಿದು ಅಭಿವೃದ್ದಿಗೊಳಿಸಿದ ಜಮೀನಿನಲ್ಲಿ ಸುಮಾರು 20–30 ವರ್ಷ ಸ್ವಾಧೀನವಿದ್ದರು. ನಮ್ಮ ತಂದೆ ಮರಣ ಹೊಂದಿದ ನಂತರ ಸ.ನಂ.30 ರಲ್ಲಿಯೇ 1 ಎಕರೆ 30

ಗುಂಟೆ ನನ್ನ ತಾಯಿಯ ಹೆಸರಿಗೆ ಮಂಜೂರಾಯಿತು ಎಂದರೆ ಸರಿ. ನಮ್ಮ ತಾಯಿಯ ಹೆಸರಿನಲ್ಲಿರುವ ಆಸ್ತಿಯನ್ನು ಈ ಕೇಸಿನಲ್ಲಿ ಸೇರಿಸಲು ತೊಂದರೆ ಇದೆಯಾ ಎಂದರೆ ಅದು ನಮ್ಮ ತಾಯಿಯ ಸ್ವಯಾರ್ಜಿತ ಆಸ್ತಿ. ಆ ಆಸ್ತಿಯ ಬಗ್ಗೆ ದಾಖಲೆಗಳು ಸಿಗದಿದ್ದ ಕಾರಣ ದಾವಾ ಸಲ್ಲಿಸುವ ಕಾಲದಲ್ಲಿ ಸೇರಿಸಿಲ್ಲ ಎಂದರೆ ಸುಳ್ಳು. ದಾವಾ ಐಟಂ ನಂಬರ್ 3 ರ ಆಸ್ತಿಯ ಖಾತೆ ನನ್ನ ತಂದೆಯ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಸಹ ನನ್ನ ತಂದೆ ಒಟ್ಟು ಕುಟುಂಬದಲ್ಲಿದ್ದಾಗ ಅನುಭವಿಸಿಕೊಂಡು ಬಂದಿದ್ದರು ಎಂದರೆ ಸುಳ್ಳು. ನನ್ನ ತಂದೆಯ ಹೆಸರಿನಲ್ಲಿದ್ದ ಆಸ್ತಿಯನ್ನು ಪಂಚಾಯಿತಿ ಅಧಿಕಾರಿಗಳೊಡನೆ ಸೇರಿ ಅಕ್ರಮವಾಗಿ ನಾನೊಬ್ಬನೆ ಖಾತೆ ಮಾಡಿಸಿಕೊಂಡಿದ್ದೇನೆ ಎಂದರೆ ಸುಳ್ಳು. ವಾದಿಯ ಹೆಸರಿನಲ್ಲಿ ಯಾವುದೇ ಆಸ್ತಿ ಇರುವುದಿಲ್ಲ ಎಂದರೆ ಸರಿ. ವಾದಿ ಅನಾರೋಗ್ಯ ಪೀಡಿತರಾದ ಕಾರಣ ಅವರ ಪತ್ನಿಯ ಜೊತೆ ಕುಂದನಹಳ್ಳಿಯಲ್ಲಿ ವಾಸವಿದ್ದಾರೆ ಎಂದರೆ ಸರಿ. ವಾದಿ ಚನ್ನಕಲ್ಲು ಗ್ರಾಮದಲ್ಲಿ ಇಲ್ಲದಿರುವ ಕಾರಣ ಅವರನ್ನು ಬಿಟ್ಟು ವಂಶವೃಕ್ಷ ಮಾಡಿಸಿಕೊಂಡು ನನ್ನ ತಂದೆಯ ಹೆಸರಿನಲ್ಲಿದ್ದ ಆಸ್ತಿಗಳನ್ನು ನಾನೇ ಖಾತೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಯಾರಾದರೂ ಪೌತಿ ಖಾತೆ ಮಾಡಿಸಿಕೊಳ್ಳಬೇಕೆಂದರೆ ಅರ್ಜಿ ಕೊಟ್ಟರೆ ಮಾತ್ರ ಖಾತೆ ಮಾಡುತ್ತಾರೆ ಎಂದರೆ ಸರಿ. ದಾವಾ ಐಟಂ ನಂಬರ್ 1 ರ ಆಸ್ತಿಯ ಖಾತೆ ಈಗ ಪ್ರತಿವಾದಿ 1 ಮತ್ತು 2 ಮತ್ತು ಮೃತ ನನ್ನ ಸಹೋದರನ ಹೆಸರಿನಲ್ಲಿದೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

***ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.***
**ಪಿರಿಯಾಪಟ್ಟಣ**